ದಿನಾಂಕಃ 13.08.2025 ರಂದು ಕರೆಯಿಸಿ ಪುನಃ ಪ್ರಮಾಣ ವಚನ ಭೋಧಿಸಲಾಯಿತು

ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಾದ ಶ್ರೀ. ಆರ್ ಹೆಚ್.ಎಸ್ ವಕೀಲರಿಂದ

ಅನಂತಪುರ ಬಸ್ ನಿಲ್ದಾಣದಿಂದ ಹೊಸುರ ಬಸ್ ನಿಲ್ದಾಣಕ್ಕೆ 5 ಕಿ.ಮಿ ಅಂತರವಿದೆ. 1 ನೇ ಎದುರುದಾರರ ಪರಿಚಯ ಇರುವುದಿಲ್ಲ. ಅಪಘಾತ ಆದ ತಕ್ಷಣ ಮೆಗ್ಗಾನ್ ಆಸ್ಪತ್ರೆಗೆ ನೇರವಾಗಿ ಹೋಗಿರುತೇನೆ. ಗ್ರಾಮಸ್ಥರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಮೆಗ್ಗಾಸ್ ಆಸ್ಪತ್ರೆಯಲ್ಲಿ ಹೇಗೆ ಪೆಟ್ಟಾಯಿತು ಎಂದು ಹೇಳಿರುತ್ತೇನೆ. ಮೊಟಾರ್ ಸೈಕಲ್ ಬಂದು ಅಪಘಾತ ಆಗಿರುತ್ತದೆ ಎಂದು ನಾನು ಮೆಗ್ಗಾನ್ ಆಸ್ಪತ್ರೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಮೊಟಾರ್ ಸೈಕಲ್ ಅಪಘಾತ ಆದಾಗ ಬಿತ್ತೋ ಇಲ್ಲವೊ ನನಗೆ ಗೊತ್ತಿರುವುದಿಲ್ಲ. ಮೆಗ್ಗಾನ್ ಆಸ್ಪತ್ರೆಯಲ್ಲಿ ಒಂದುವರೆ ತಿಂಗಳು ದಾಖಲಾಗಿದ್ದೆ. ಅಲ್ಲಿ ಪೋಲೀಸರು ಬಂದು ಹೇಳಿಕೆ ಪಡೆದಿರುತ್ತಾರೆ. ದಿನಾಂಕ ನೆನಪಿರುವುದಿಲ್ಲ. ಸಾಕ್ಷಿ ಮುಂದುವರೆದು ನಾನು ದೂರನ್ನು ನೀಡಿದ ಮೇಲೆ ಬಂದಿರುತ್ತಾರೆ ಎಂದು ನುಡಿಯತ್ತಾರೆ. ದೂರನ್ನು ನನ್ನ ಅಳಿಯ ನೀಡಿರುತ್ತಾರೆ. ಅಪಘಾತವನ್ನು ನೋಡಿದವರು ರಾಮಪ್ಪ ಎನ್ನುವವರು ಇದ್ದಾರೆ. ಮೊಟಾರ್ ಸೈಕಲ್ ನಿಂದ ನನಗೆ ಅಪಘಾತ ಆಗಿರುವುದಿಲ್ಲ ಹಾಗೂ ನಾನೇ ಖುದ್ದು ಬಿದ್ದುದರಿಂದ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಶಾಮೀಲಾಗಿ ಸದರಿ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಮೆಗ್ಗಾನ್ ಆಸ್ಪತ್ರೆಯ ಚಿಕಿತ್ಸೆಯ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ವೈದ್ಯಕೀಯ ದಾಖಲೆಗಳಿಗೂ ಹಾಗೂ ಅಪಘಾತಕ್ಕೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ವೈದ್ಯಕೀಯ ಬಿಲ್ಲುಗಳನ್ನು ಹಾಜರುಪಡಿಸಿದ ಬಾಬ್ತು ನಾನು ಯಾವುದೇ ಖರ್ಚು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮುಂದಿನ ಚಿಕಿತ್ಸೆಗಾಗಿ ಹಾಗೂ ವರಮಾನ ನಷ್ಟವಾದ ಬಾಬ್ತು ಕೇಳಿದ ಮಾಬಲಗು ಸುಳ್ಳು ಎಂದರೆ ಸರಿಯಲ್ಲ. ನನಗೇ ಯಾವುದೇ ಅಂಗನೂನ್ಯತೆ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಗಾರೆ ಕೆಲಸಕ್ಕೆ ಹೋಗುತ್ತಿದೆ. ಅಪಘಾತ ಆದ ಬಳಿಕ ನಾನು ಯಾವುದೇ ಕೆಲಸ ಮಾಡುತ್ತಿಲ್ಲ. ಅಪಘಾತ ಆಗುವ ಮೊದಲು ಯಾವ ಕೆಲಸ ಮಾಡುತ್ತಿದ್ದೇನೋ ಅದೇ ಕೆಲಸವನ್ನು ಮುಂದುವರೆಸಿದ್ದೇನೆ ಎಂದರೆ ಸರಿಯಲ್ಲ. ಮೆಗ್ಗಾನ್ ಆಸ್ಪತ್ರೆಯಲ್ಲಿ ನಾನು ಮದ್ಯಪಾನ ಮಾಡಿದ್ದೇನೆ ಎಂದು ವರದಿ ನೀಡಿದ್ದಾರೆ ಎಂದರೆ ಸಾಕ್ಷಿ ನಾನು ಮದ್ಯಪಾನ ಮಾಡಿರಲಿಲ್ಲ ಎಂದು ಉತ್ತರಿಸುತ್ತಾರೆ. ನಾನು ಮದ್ಯಪಾನ ಮಾಡಿ ಅಡ್ಡಾ ದಿಡ್ಡಿ ಹೋಗಿ ನನ್ನ ತಪ್ಪಿನಿಂದಲೇ ಪೆಟ್ಟುಮಾಡಿಕೂಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಯಾವುದೇ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವಾಹನಕ್ಕೆ ರಿಜಿಸ್ಟ್ರೇಷನ್

ಸರ್ಟಿಫಿಕೇಟ್ ಇರಲಿಲ್ಲವಾದುದರಿಂದ 2 ನೇ ಎದುರುದಾರರು ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಾದ ಶ್ರೀಮತಿ ಬಿ ಆರ್ ವಕೀಲರಿಂದ</u>

1 ನೇ ಎದುರುದಾರರ ತಪ್ಪಿನಿಂದ ಯಾವುದೇ ಅಪಘಾತ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದಲೇ ಪೆಟ್ಟು ಮಾಡಿಕೂಂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರ ವಾಹನಕ್ಕೆ ಚಾಲನ ಪರವಾನಿಗೆ ಹಾಗು ವಿಮೆ ಇತ್ತು ಎಂದರೆ ಸರಿ. 1 ನೇ ಎದುರುದಾರರ ಚಾಲನ ಪರವಾನಿಗೆಯನ್ನು ತೋರಿಸಲಾಗಿ ಸಾಕ್ಷಿ ಸದರಿ ಚಾಲನಾ ಪರವಾನಿಗೆ 1 ನೇ ಎದುರುದಾರರದ್ದು ಎಂದು ಗುರುತಿಸಿದ ಮೇರೆಗೆ ಅದನ್ನು ನಿಆರ್-1 ಎಂದು ಗುರುತಿಸಲಾಯಿತು.

ಮರುವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ